ಪ್ರಧಾನ ದಿವಾಣಿ ನ್ಯಾಯಾಧಿಶರು ಹಾಗೂ ಪ್ರ. ದ. ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಿಕ್ಕೋಡಿ. ಸಾಃ ಚಿಕ್ಕೋಡಿ.

| | |
|---|---|
| ಓ ಎಸ್ ನಂ | 70/21 |
| ವಾದಿ ಸಂ | ಪಿ.ಡಬ್ಲ್ಯೂ1 |
| ದಿನಾಂಕ | 12-10-2022 |

<u>ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.</u>

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ ಆರ್ ಎಸ್ ನ್ಯಾಯವಾದಿಗಳಿಂದ

ನಾನು ಮೊದಲನೆ ಪಿ ಯು ಸಿ ವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ಸದಲಗಾ ಗ್ರಾಮ ಪಂಚಾಯತಿ ಹದ್ದಿಯಲ್ಲಿ ನನ್ನ ಜಮೀನು ಮತ್ತು ಮನೆ ಇರುತ್ತದೆ. ಸದರಿ ಮನೆಯಲ್ಲಿ ವಾಸ ಇರುವ ಕುರಿತು ನನ್ನ ತಂದೆಗೆ ಆದಾರ ಗುರುತಿನ ಚೀಟಿ, ಪಡಿತರ ಚೀಟಿ ನೀಡಿತ್ತಾರೆ ಎಂದು ಸೂಚಿಸುವುದು ಸರಿ. ಸದರಿ ಮನೆ ನಮ್ಮ ಪೂರ್ವಜರಿಂದ ಇದ್ದು ತುಂಬಾ ಹಳೆ ಮನೆ ಇರುತ್ತದೆ ಎಂದು ಸೂಚಿಸುವುದು ಸರಿ. ಸದರಿ ಮನೆಗೆ ಸದಲಗಾ ಗ್ರಾಮ ಪಂಚಾಯತಿ ಸಂಖ್ಯೆ ಮತ್ತು ತೇರಿಗೆ ಘೋಷಣಾ ಪತ್ರ ನೀಡಿರುತ್ತಾರೆ ಎಂದು ಸೂಚಿಸುವುದು ಸರಿ. ಸದರಿ ಮನೆ ನನ್ನ ಹೆಸರಿನಿಂದ ಇರುತ್ತದೆ. ಸದರಿ ಮನೆಯ ಗ್ರಾಮ ಪಂಚಾಯತಿ ಸಂಖ್ಯೆ 2466 ಎ/1 ಇರುತ್ತದೆ. ಸದರಿ ಮನೆಯನ್ನು ಹೊರತು ಪಡಿಸಿ ಸದಲಗಾ ಗ್ರಾಮ ಪಂಚಾಯತಿ ಹದ್ದಿಯಲ್ಲಿ ನನಗೆ ಸಂಬಂದಿಸಿದಂತೆ ನನಗೆ ಮನೆ ಇರುವುದಿಲ್ಲ. ಗ್ರಾಮ ಪಂಚಾಯತಿ ಸಂಖ್ಯೆ2466 ಎ/1 ಇದಕ್ಕೆ ನನ್ನ ತಂದೆಯ ಹೆಸರು ನಮೂದು ಆಗಿರುವ ಕುರಿತು ನನಗೆ ಗೊತ್ತಿಲ್ಲ. 1999 ರ ಮೊದಲು ಸದರಿ ಗ್ರಾಮ ಪಂಚಾಯತಿ ಸಂಖ್ಯೆ 2466 ಎ/1 ಇದಕ್ಕೆಶ್ರೀಗುಣದರ ಪದ್ಮಣ್ಣ ಚೂಟೆ ಎನ್ನುವವರ ಹೆಸರು ದಾಖಲು ಆಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಹೆಸರು ದಾವಾ ಸ್ವತ್ತಿನ ಪಂಚಾಯತಿ ದಾಖಲೆಯಲ್ಲಿ ಯಾವ ವರ್ಷ ಮತ್ತು ಯಾವ ದಾಖಲೆಗಳ ಆದಾರ ಮೇಲೆ ದಾಖಲು ಆಗಿರುತ್ತದೆ ಎನ್ನುವುದು ನನಗೆ ಮಾಹಿತಿ ಇಲ್ಲ. ಸದರಿ ಶ್ರೀಗುಣದರ ಪದ್ಮಣ್ಣ ಚೂಟೆ ಎನ್ನುವವರ ನನ್ನ ತಂದೆ ಹೆಸರಿಗೆ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಯಾವ ವರ್ಷದಲ್ಲಿ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ನನಗೆ ನೆನಪು ಇಲ್ಲ. ಸದರಿ ಖರೀದಿ ಪತ್ರವನ್ನು ನಾನು ನೋಡಿರುತ್ತೇನೆ. ಅದರ ದಿನಾಂಕ ನನಗೆ ಹೇಳಲು ಆಗುವುದಿಲ್ಲ. ಸದರಿ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಶ್ರೀಗುಣದರ ಪದ್ಮಣ್ಣ ಚೂಟೆ ಎನ್ನುವವರ ನನ್ನ ತಂದೆ ಹೆಸರಿಗೆ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಕ್ರಯ ಪತ್ರದ ಆದಾರದ ಮೇಲೆ ನನ್ನ ತಂದೆ ಹೆಸರು ಪಂಚಾಯತಿ ದಾಖಲೆಗಳನ್ನು

ನಮೂದು ಆಗಿರುತ್ತದೆ. ಸದರಿ ಮನೆಯಲ್ಲಿ ವಾಸ ಇರುವ ಕುರಿತು ಆದಾರ ಗುರುತಿನ ಚೀಟಿ ಮತ್ತು ಪಡಿತರ ಚೀಟಿ ಅಥವಾ ಪಂಚಾಯತಿಯಿಂದ ನೀಡಿದರುವ ಕೂಪನ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಾನು ಹೇಳುವ ಮನೆ ಸಂಖ್ಯೆಗೆ ಪಟ್ಟಣ ಪಂಚಾಯತಿ ಸಂಖ್ಯೆ 2466 ಎಂದು ನೀಡಿಲಾಗಿದೆ ಎಂದು ಸೂಚಿಸುವುದು ಸರಿ. ಪಟ್ಟಣ ಪಂಚಾಯತಿ ಸಂಖ್ಯೆ 2466 ಇದಕ್ಕೂ ಮೊದಲು 1914 ಎಂದು ಇತ್ತು ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ನಂಬಗಳು ಇರುವ ಕುರಿತಾಗಿ ಪಟ್ಟಣ ಪಂಚಾತಿಗೆ ಹೋಗಿ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿಲ್ಲ. ಪಟ್ಟಣ ಪಂಚಾಯತಿ ಸಂಖ್ಯೆ 2466 ಇದು ಗುಣದರ ಎನ್ನುವವರ ಹೆಸರಿನಿಂದ ಇರುವ ಕುರಿತಾಗಿ ನನಗೆ ಮಾಹಿತಿ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಆಸ್ತಿ ಈ ಮೊದಲು ಯಾರ ಹೆಸರಿನಿಂದ ಇತ್ತು ಎಂದು ನಾನು ಪರಿಶೀಲನೆ ಮಾಡಿಲ್ಲ. ಸದರಿ ಆಸ್ತಿ ಸದಲಗಾ ಗ್ರಾಮದ ಗುಂಡಕಲ್ಲೆ ಗಲ್ಲಿಯಲ್ಲಿ ಇರುವ ಕುರಿತಾಗಿ ನನಗೆ ಮಾಹಿತಿ ಇರುತ್ತದೆ ಎಂದು ಸೂಚಿಸುವುದು ಸರಿ. ಸದರಿ ಆಸ್ತಿಯನ್ನು ದಿಃ09-05-1974 ರಂದು ನೋಂದಾಯಿತ ಕ್ರಯ ಪತ್ರದ ಮೂಲಕ ಪ್ರತಿವಾದಿ ಪಡೆದಕೊಂಡಿರುತ್ತಾರೆ ಎನ್ನುವುದು ನನಗೆ ಮಾಹಿತಿ ಇಲ್ಲ. ಸದರಿ ಆಸ್ತಿಯನ್ನು ಲಕ್ಷ್ಮಣ ಮಲ್ಲಪ್ಪ ಪಾಟೀಲ ಎನ್ನುವವರು ಗುಣದರಣ ಎನ್ನುವವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನ ಪಂಚಾಯತಿ ದಾಖಲೆಗಳಲ್ಲಿ ಗುಣದರಣ ಎನ್ನುವವರ ಹೆಸರು ಯಾವ ಆದಾರ ಮೇಲೆ ದಾಖಲು ಆಗಿರುತ್ತದೆ ಎಂದು ನಾನು ಪರಿಶೀಲನೆ ಮಾಡಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ ಎಷ್ಟು ಇರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಮೂಲ ಆಸ್ತಿಯಲ್ಲಿ ಎಷ್ಟು ವಿಸ್ತೀರ್ಣವನ್ನು ನನ್ನ ತಂದೆ ಕ್ರಯಕ್ಕೆ ಪಡೆದುಕೊಂಡಿರುತ್ತಾನೆ ಎನ್ನುವುದು ನನಗೆ ಮಾಹಿತಿ ಇಲ್ಲ. ಪಟ್ಟಣ ಪಂಚಾಯತಿ ಸಂಖ್ಯೆ 2466 ಇದು ಹಳೆ ಮನೆ ಮತ್ತು ಖುಲ್ಲಾ ಜಾಗೆ ಇರುತ್ತದೆ ಎಂದು ಸೂಚಿಸುವುದು ಸರಿ. ಸದರಿ ಆಸ್ತಿ ದಕ್ಷಿಣ ಉತ್ತರ ಉದ್ದ ಇದ್ದು ಪೂರ್ವ ಪಶ್ಚಿಮ ಅಗಲ ಇರುತ್ತದೆ ಎಂದು ಸೂಚಿಸುವುದು ಸರಿ. ಸದರಿ ಆಸ್ತಿ ಪೂರ್ವ ಪಶ್ಚಿಮ 17 ಅಡಿ ದಕ್ಷಿಣ ಉತ್ತರ 68 ಅಡಿ ಇರುತ್ತದೆ ಎಂದು ಸೂಚಿಸುವುದು ಸರಿ. ಸದರಿ ಆಸ್ತಿಯಲ್ಲಿ ಕೆಲವೊಂದು ಭಾಗ ಮನೆ ಕಟ್ಟಿದ್ದು ಕೆಲವೊಂದು ಭಾಗ ಖಾಲಿ ಇರುತ್ತದೆ ಎಂದು ಸೂಚಿಸುವುದು ಸರಿ.

ನಾನು ದಾವೆಯನ್ನು ಸಲ್ಲಿಸಿದ ನಂತರ ಪ್ರತಿವಾದಿ ಪ್ರಕರಣದಲ್ಲಿ ಪ್ರತಿವಾದ ಪತ್ರ ಸಲ್ಲಿಸಿರುವ ಕುರಿತು ನಮ್ಮ ವಕೀಲರು ನಮಗೆ ಮಾಹಿತಿ ನೀಡಿರುತ್ತಾರೆ ಎಂದು ಸೂಚಿಸುವುದು ಸರಿ. ಸದರಿ ಪ್ರತಿವಾದ ಪತ್ರದಲ್ಲಿ ಪಟ್ಟಣ ಪಂಚಾಯತಿ ಸಂಖ್ಯೆ2466 ಇದರ ವಿಸ್ತೀರ್ಣ ಪೂರ್ವ ಪಶ್ಚಿಮ 8 ಪೂಟ 6 ಇಂಚ ಮತ್ತು ದಕ್ಷಿಣ ಉತ್ತರ 60 ಅಡಿ ಜಾಗವನ್ನು ಪದ್ಮಣ್ಣ ಎನ್ನುವವರು ಪ್ರತಿವಾದಿಯರಿಗೆ ಮಾರಾಟ ಮಾಾಡಿರುತ್ತಾರೆ ಎಂದು ನಮೂದಿಸಿರುತ್ತಾರೆ ಎಂದು ಸೂಚಿಸುವುದು ಸರಿ. ಸದರಿ ಅಳತೆ

ಸ್ವತ್ತನ್ನು ಪದ್ಮಣ್ಣ ಎನ್ನುವವರು ಪ್ರತಿವಾದಿಯರಿಗೆ ರೂ.2,51,000/- ಗಳಿಗೆ ದಿಃ28-06-2014 ರಂದು ನೋಂದ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಕ್ರಯ ಪತ್ರದ ಆದಾರ ಮೇಲೆ ಪಂಚಾಯತಿ ದಾಖಲೆಗಳಲ್ಲಿ ಠರಾವು ಪಾಸ ಮಾಡುವ ಮೂಲಕ ಪ್ರತಿವಾದಿಯರ ಹೆಸರು ದಾಖಲಿಸಿರುತ್ತಾರೆ ಎನ್ನುವುದು ನನಗೆ ಮಾಹಿತಿ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಕ್ರಯ ಪತ್ರದ ನಂತರ ಪ್ರತಿವಾದಿಯರು ಪಡೆದುಕೊಂಡ ಆಸ್ತಿಗೆ 2466 ಎ ಎಂದು ಸಂಖ್ಯೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದಲ್ಲಿ ಮನೆ ಮತ್ತು ಖಾಲಿ ಜಾಗೆ ಮಾರಿರುವ ಕುರಿತು ನಮೂದಿಸಿಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕ್ರಯದ ಮೂಲಕ ಪಡೆದುಕೊಂಡು ನಂತರ ಪ್ರತಿವಾದಿಯರು ತಾವು ಕ್ರಯಕ್ಕೆ ಪಡೆದ ಸ್ವತ್ತಿನಲ್ಲಿ ವಾಸ ಮಾಡುತ್ತಿದ್ದು ಮತ್ತು ಪಂಚಾಯತಿಗೆ ಕಂದಾಯ ಪಾವತಿ ಮಾಡುತ್ತಿದ್ದಾರೆ ಎನ್ನುವ ವಿಷಯ ನನಗೆ ತಿಳಿದಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಆಸ್ತಿಯಲ್ಲಿ ಪ್ರತಿವಾದಿಯರು ಹೊಸ ಬಾಗಿಲ ಮತ್ತು ಕಿಡಕಿಗಳನ್ನು ಅಳವಡಿಸಿರುತ್ತಾರೆ ಎಂದು ಸೂಚಿಸುವುದು ಸರಿ. ಸದರಿ ಆಸ್ತಿಯಲ್ಲಿ ಪ್ರತಿವಾದಿಯರು ಸ್ವಾದಿನ ಅನುಬದಲ್ಲಿ ಇರುತ್ತಾರೆ ಎಂದು ಸೂಚಿಸುವುದು ಸರಿ. ಪ್ರತಿವಾದಿಯರು ಕ್ರಯಕ್ಕೆ ಪಡೆದುಕೊಂಡಿರುವ ಆಸ್ತಿಯ ಮೇಲೆ ನನಗೆ ಹಕ್ಕು ಇರುತ್ತದೆ. ಸದರಿ ಆಸ್ತಿಗೆ ಸಂಬಂದಿಸಿದಂತೆ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದು ಸೂಚಿಸುವುದು ಸರಿ. ಪ್ರತಿವಾದಿಯರು ಕ್ರಯಕ್ಕೆ ಪಡೆದ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

ಪ್ರತಿವಾವಾದಿಯರು ಆಸ್ತಿ ಕ್ರಯಕ್ಕೆ ಪಡದ ನಂತರ ಉಪ ನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ದಾಖಲೆಯನ್ನು ಪರಿಶೀಲನೆ ಮಾಡಿಲ್ಲ. ಪ್ರತಿವಾದಿಯರ ಹೆಸರು ಪಂಚಾಯತಿ ದಾಖಲೆಗಳಲ್ಲಿ ನಮೂದು ಆಗಿರುವುದನ್ನು ಪ್ರಶ್ನಿಸಿ ತಾಲೂಕು ಪಂಚಾಯತಿ ಅಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿಲ್ಲ. ನನ್ನ ಅಜ್ಜನ ಹೆಸರು ಪದ್ಮಣ್ಣ ಎಂದು ಇರುತ್ತದೆ ಎಂದು ಸೂಚಿಸುವುದು ಸರಿ. ಪದ್ಮಣ್ಣ ಎನ್ನುವವರಿಗೆ ಶಾಂತಪ್ಪ ಮತ್ತು ಗುಣದರ ಎನ್ನುವ ಮಕ್ಕಳು ಇರುತ್ತಾರೆ ಎಂದು ಸೂಚಿಸುವುದು ಸರಿ. ನನ್ನ ತಂದೆ ಹಜಾರೆ ಎನ್ನುವ ಕುಟುಂಬಕ್ಕೆ ದತ್ತು ಪುತ್ರನಾಗಿ ಹೋಗಿರುವುದರಿಂದ ನಮ್ಮ ಅಡ್ಡ ಹೆಸರು ಹಜಾರೆ ಎಂದು ಇರುತ್ತದೆ ಎಂದು ಸೂಚಿಸುವುದು ಸರಿ. ನಂತರ ನನ್ನ ತಂದೆ ಹೆಸರಿಗೆ ಹಜಾರೆ ಎನ್ನುವ ಕುಟುಂಬದ ಆಸ್ತಿ ವರ್ಗಾವಣೆ ಆಗಿದ್ದು ನನ್ನ ತಂದೆ ನಂತರ ನನ್ನ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದು ಸೂಚಿಸುವುದು ಸರಿ. ಅದರಂತೆ ಸದರಿ ಸ್ವತ್ತುಗಳು ನಮ್ಮ ಸ್ವಾದಿನದಲ್ಲಿ ಇರುತ್ತದೆ ಎಂದು ಸೂಚಿಸುವುದು ಸರಿ.

ದಿಃ03-12-2014 ರಂದು ಆಸ್ತಿಯ ಮೂಲ ಮಾಲಿಕರಾದ ಗುಣದರ ಎನ್ನುವವರು ಪಟ್ಟಣ ಪಂಚಾಯತಿ ಸಂಖ್ಯೆ 2466 ಇದಕ್ಕೆ ಬೇರೆ ಯಾರದ್ದು ಹೆಸರು ದಾಖಲಿಸಬಾರದು ಎಂದು ಅರ್ಜಿಯನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರತಿವಾದಿ ತಾನು ಕ್ರಯಕ್ಕೆ ಪಡೆದಿರುವ

ಆಸ್ತಿ ನಂಬರ 2466 ಎ ಇದರ ಮಾಲಿಕನು ಇರುತ್ತೇನೆ ಎಂದು ಮೂಲ ದಾವೆ ನಂಬರ 529/2013 ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ಪದ್ಮಣ್ಣ ಮತ್ತು ಪ್ರತಿವಾದಿ ಇವರು ರಾಜಿ ಸಂದಾನದ ಮೂಲಕ ಇತ್ಯರ್ಥ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರಾಜಿ ಸಂದಾನದ ಮೇರೆಗೆ ಪಟ್ಟಣ ಪಂಚಾಯತಿ ಆಸ್ತಿ ನಂಬರ 2466 ಎ ಇದರ ಕುರಿತಾಗಿ ಸದರಿ ಪದ್ಮಣ್ಣ ಎನ್ನುವವರು ಪ್ರತಿವಾದಿ ಹೆಸರಿಗೆ ದಿಃ20-08-2014 ರಂದು ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ.

ಪಟ್ಟಣ ಪಂಚಾಯತಿ ಸಂಖ್ಯೆ 2466 ಅಥವಾ 2466 ಎ ಇದರ ಮೇಲೆ ನಮಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಪಟ್ಟಣ ಪಂಚಾಯತಿ ಸಂಖ್ಯೆ2466 ಎ/ 1 ಎಂದು ಆಸ್ತಿ ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಗ್ರಾಮ ಪಂಚಾಯತಿ ಸಂಖ್ಯೆ 2466 ಎ/1 ಎನ್ನುವ ಆಸ್ತಿ ವಸ್ತು ಸ್ಥಿತಿಯಲ್ಲಿ ಇರುವುದೇ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

(ಸಾಕ್ಷಿಯ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧಿಶರು,
ಚಿಕ್ಕೋಡಿ.